Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ೨೬ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

25—5—1962

ಪ್ರಮುಖ ವರ್ತಮಾನಗಳಿಗೆ
ವಿಶೇಷವಾದ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಚಂದಾಸಂಖ್ಯೆಣ್ಣೆ ಮಾಡಿ

ಲೋಕಸಬೆ ಸದಸರನು ಶೆ ಳ ಹೊರಗೆ ಕಳುಹಿಸಲಾಯಿತು

ನವ ದೆಹಲಿ 24 — ಸೋಷಲಿಸ್ಟ್ ತಂಡದ ಶ್ರೀ ಮಣಿರಾಂಗಂನ್ನು ಲೋಕ ಸಭೆಯಿಂದ ಹೊಂಗೆಹಾಕಲು ಮಾರ್ಷಲ್‌ಗಳನ್ನು ಕರೆಯಬೇಕಾಯಿತು. ವಿಶೇಷ ಪ್ರಕಾರವಾಗಿ ಅಧ್ಯಕ್ಷರನ್ನು ಉಲ್ಲಂಘನೆ ಮಾಡಿದ್ದಕ್ಕೆ ಮಣಿರಾಂ ಬಗ್ಗಿಯವರನ್ನು 7 ದಿನಗಳ ವರಿಗೆ ಸ್ಪೀಕರು ಸಸ್ಪೆಂಡು ಮಾಡಿದರು. ಸಭೆಯಿಂದ ಹೊರಗೆ ಹೋಗುವಂತೆ ತಿಳಿಸಿದರು. ಅವರು ಅದಕ್ಕೆ ಒಪ್ಪದೆ ಪ್ರಶ್ನಾವಳಿ ಮುಖಾಲಕ ಜರ್ಚೆಗೆ ತರಲು ಅವಕಾಶ ಸಿಗದ ವಿಚಾರವೊಂದನ್ನು ಅವರು ತರಬೇಕೆಂದ ಇದ್ದರು. ಅದೆಂದರೆ ಪರಿವ ಹಾತ್ಮಾ ಗಾಂಧಿಯವರು ತೊಲೆ ಅಡ ಬಿರ್ಲಾ ಭವನವನ್ನು ಸರ್ಕಾರ ತೆಗೆದುಕೊಳ್ಳಬೇಕೆಂಬುದು. ಗಾಂಧೀಜಿ ಹತ್ಯೆಯ ನೆಲೆ ಪ್ರಮಾಣ ಮಾಡಿದ ಜನರು ಕಾರ್ಯ ಮಾಡಬೇಕಾದಾಗ ಅಥವಾ ಹಣ ವೆಚ್ಚ ಮಾಡಬೇಕಾದಾಗ ಅದನ್ನು ಮಾಡುವುದಿಲ್ಲ ಎಂದರು. ಅಧ್ಯಕ್ಷರು ಎಚ್ಚರಿಸಿದಾಗ್ಯೂ ಬಗ್ಗಿಯವರು ಮಾತನಾಡುತ್ತಲೇ ಇದ್ದರು ಮಾತನಾಡುವ ಸದಸ್ಯರ ಪಕ್ಷದವರು ಅವರನ್ನು ಹತೋಟಿಗೆ ತೆಗೆದುಕೊಳ್ಳದಿದ್ದರೆ ಇಡೀ ಪಕ್ಷದ ಮೇಲೆ ಕ್ರಮ ಪರಿಶೀಲಿಸುವುದಾಗಿ ಎಚ್ಚರಿಕೆಯನ್ನಿತ್ತರು.

ಸುಳ್ಳು ಸುದ್ದಿ

ನವ ದೆಹಲಿ 23 — ಶ್ರೀನಗರದ ಸ್ಥಳವೊಂದಕ್ಕೆ ಪಂ|| ನೆಹರು ಬಂದಾಗ ಕರೀಬಾವುಟ ಹಿಡಿದು ಅವರ ವಿರುದ್ಧ ಘೋಷಿಸಿದರೆಂದು ಪಾಕಿಸ್ತಾನ ರೇಡಿಯೋ ಮಾಡಿದ ಪ್ರಚಾರ ಸತ್ಯಕ್ಕೆ ದೂರವೆಂದು ವಿದೇಶ ಇಲಾಖೆ ಪ್ರಕಟಿಸಿದೆ

★

ಥೈಲ್ಯಾಂಡಿಗೆ ಬ್ರಿಟಿಷ್ ಸೇನೆ ಕಳಿಸಲಿಕೆ

ಮೂರೇ ರೋಗಿಗಳ ಪರೀಕ್ಷೆ

ಪಾಟ್ನಾ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಒಂದೂಕಾಲು ಲಕ್ಷ ರೂ. ವೆಚ್ಚದಲ್ಲಿ ವಿದ್ಯುತ್ ರೇಡಿಯೋಗ್ರಾಂ 1960 ರಲ್ಲಿ ಸ್ಥಾಪಿಸಲಾಯಿತು. ಈ ವರಿಗೆ ಅದರಲ್ಲಿ ಪರೀಕ್ಷೆ ಮಾಡಿಸಿಕೊಂಡವರು ಕೇವಲ 3 ಮಂದಿ. ಸೌಲಭ್ಯಗಳನ್ನುಳ್ಳ ಮನುಷ್ಯರಿಗೆ ಮಾತ್ರ ಇದರ ಪ್ರಯೋಜನವೇ ಎಂದು ಸಿಎಸ್‌ಪಿಯ ಶ್ರೀ ರಮಾನಂದ ತಿವಾರಿ ಪ್ರಶ್ನಿಸಲು ಅದು ಸೌಲಭ್ಯವನ್ನುಳ್ಳ ರೋಗಕ್ಕೆ ಮಾತ್ರ ಉಪಯೋಗ ಇದೆ ಎಂದರು.

ಪಾನಪ್ರತಿಬಂಧ ಬಗ್ಗೆ

ಪ್ರಧಾನ ನೀತಿಯುತ ವಿಚಾರವಾದ ಪಾನಪ್ರತಿಬಂಧ ಪ್ರಶ್ನೆಯನ್ನು ಶಾಸ್ತ್ರೀಯ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಪರಿಶೀಲಿಸುವಂತೆ ಆಂಧ್ರ ಸರ್ಕಾರ ಭಾರತ ಸರ್ಕಾರವನ್ನು ಕೋರಿದೆ. ಈ ವಿಚಾರವನ್ನು ಆಂಧ್ರ ಮುಖ್ಯ ಮಂತ್ರಿ ಶ್ರೀ ಎಸ್. ಸಂಜೀವ ರೆಡ್ಡಿಯವರು ನಿನ್ನೆ ಹೈದರಾಬಾದಿನಲ್ಲಿ ತಿಳಿಸಿದರು.

ನಾಲ್ವರ ಸಾವು

ಧೋಲ್ಪುರ 23 — ಇಲ್ಲಿಗೆ 15 ಮೈಲಿಗಳ ದೂರವಿರುವ ಹುವಾಕೇರ ಗ್ರಾಮದಲ್ಲಿ ಇಬ್ಬರು ಮಕ್ಕಳು ಸೇರಿ ನಾಲ್ವರು ಜೀವಸಹಿತ ಸುಟ್ಟು ಸತ್ತರು

ಹಕ್ಕುಬಾಧ್ಯತೆಗೆ ಲೋಪ

ಪಾಟ್ನ 24 — ಅನೇಕ ಪ್ರಶ್ನೆಗಳಿಗೆ ಉತ್ತರಕೊಡದಿರುವದು ಹಕ್ಕುಬಾಧ್ಯತೆ ಭಂಗವದಾಗಿ ಟೈಜರಿ ಬೆಂಚಿಗೆ ಸ್ಪೀಕರ್ ಶ್ರೀ ಲಕ್ಷ್ಮೀ ನಾರಾಯಣ ಸುಧಾನ್ಸು ಎಚ್ಚರಿಸಿದರು.

ವಿಶ್ವ ಪರ್ಯಟನೆ

ಅಮೆರಿಕದ ಗೃಹ ಪ್ರವಾಸಿ ಕಮಾಂಡರ್ ಮಾಲ್ಕಂ ಸ್ಕಾಟ್ ಕಾರ್ಪೆಂಟರ್ ರಾಕೆಟ್‌ನಲ್ಲಿ 3 ಬಾರಿ ಪ್ರದಕ್ಷಿಣ ಪರ್ಯಟನ ಮಾಡಿದರು

ಒಪ್ಪಂದ

ಯುದ್ಧ ಪ್ರಚೋದನೆಯನ್ನು ಖಂಡಿಸುವ ದಂ ಬಗ್ಗೆ ರಷ್ಯ ಮತ್ತು ಅಮೆರಿಕ ಒಪ್ಪಿನೆ ಎಂದು ಜಿನೀವಾ ವಾರ್ತೆ

ಈಗಿನ ಪರಿಸ್ಥಿತಿ

ಆಹಾರ ಪರಿಸ್ಥಿತಿಯಲ್ಲಿ ಈಗಿರುವ ತೃಪ್ತಿ ಮತ್ತಾಶಾದಾಗಲೂ ಇರಲಿಲ್ಲವೆಂದು ಬಂದಾಗಿ ಲೋಕಸಭೆಯಲ್ಲಿ ಆಹಾರ ಮಂತ್ರಿ ಶ್ರೀ ಎಸ್.ಕೆ ಪಾಟೀಲರು ತಿಳಿಸಿದರು

ಭಾರತೀಯ ತಂಡ

ಭಾರತ ಗೌರೀಶಂಕರ ಶಿಖರ ತಂಡ ದಕ್ಷಿಣ ಕಾಲು ತಲುಪಿತೆಂದು ನವ ದೆಹಲಿ ವಾರ್ತೆ.

ಬಂಧನ

ಸ್ಮೋಟಕ ಪದಾರ್ಥಗಳನ್ನು ಹೊಂದಿದ್ದ ಆರೋಪದ ಮೇಲೆ ಮೂವರು ಪಾಕಿಸ್ತಾನಿಗಳನ್ನು ಕಲ್ಕತ್ತಾದಲ್ಲಿ ಬಂಧಿಸಿದೆ.

ಚೀನಾಕ್ಕೆ ಅವಕಾಶ

ಚೀನಾ ನಿರಾಶ್ರಿತರನ್ನು ಅವರಿಕ್ಕೆ ಸೇರಿಸುವದಾಗಿ ಅಧ್ಯಕ್ಷ ಕೆನೆಡಿ ತಿಳಿಸಿದ್ದಾರೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ - ದೈವಜ್ಞಶಿಖಾಮಣಿ
ಪಂಪಶ್ಯಾಸ್ತ್ರಿ ಜೋಯಿಸರಿಂದ

26 ಶಸ್ತಮಿ ಧನಿಷ್ಠ

ವಿವಿಧ ವಿಷಯಗಳು

ಫಾಲ್ಟನ್‌ಗಂಜ್ 24 — ಸರ್ಕಾರದ ಪೋಲೀಸರಿಗೂ ಹಾಗೂ ದಂಗೆಕೋರ ಪೋಲೀಸರಿಗೂ ಈ ಮಾಹೆ ತಾ|| 16 ರಂದು ಹೊಡೆದಾಟವಾಗಿ ಶಿಲ್ಪ ಪೋಲೀಸು ತಾಣ್ಮವನ್ನು ದಂಗೆಕೋರರು ವಶಮಾಡಿಕೊಂಡರು. ಈ ಘರ್ಷಣೆಯಲ್ಲಿ ಓರ್ವ ಪೋಲೀಸನು ಮರಣಹೊಂದಿ ಕೆಲವರಿಗೆ ಗಾಯವಾಗಿವೆ

ರಾಜಗೀರ್ 24 — ರಾಜಗಂಗಿನ ಗೃಧ್ರಕೂಟ ಬೆಟ್ಟದ ಮೇಲೆ ಭಗ್ನವಾಗಿರುವ ಬುದ್ಧ ಹಿತೋಪದೇಶ ಮಾಡಿದ್ದ ಸ್ಥಳದಲ್ಲಿ ಈಗಲೂ ಹಿತೋಪದೇಶ ಕೇಳುತ್ತಿದೆ ಎಂದು ಈಗಲೂ ನಂಬುವವರಿದ್ದಾರೆ. ರಾಜಗೀರಿನಲ್ಲಿರುವ ಜಪಾನ್ ಬೌದ್ಧ ದೇವಾಲಯದಲ್ಲಿರುವ ಪ್ರಧಾನ ಪುರೋಹಿತರಾದ ರೆ|| ಯಾಗಿತೆ ಹೀಗೆ ತಿಳಿಸಿರುವರು

ನವ ದೆಹಲಿ 24 — ಜುನಾಗಡ ಹಾಗೂ ಮಾನವದಾರ್ ಗಳು ಪಾಕಿಸ್ತಾನದ ಭಾಗ ಮತ್ತು ಕಾಶ್ಮೀರ ಕಣಿವೆಯಲ್ಲಿರುವ ಪ್ರದೇಶ ಎಂದು ತೋರಿಸುವ ಭೂಪಟವನ್ನು ಪಾಕಿಸ್ತಾನ ಪ್ರವಾಸಿಕ ನೋರ್ವನಿಂದ ಸ್ವೀಕರಿಸಿಕೊಂಡಿದೆ ಎಂದು ವಿದೇಶ ಉಪಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ ಲೋಕಸಭೆಯಲ್ಲಿ ತಿಳಿಸಿದರು.

ರಂಗೂನ್ 24 — ಅಮೆರಿಕಾ ಬಿಳ್ಳ ಟ್ಟಿನ ಪರಿಹಾರಕ್ಕೆ ಬರ್ಮಾ ವಿಭಜನೆಗೆ ತಾವು ಒಪ್ಪುವದಿಲ್ಲವೆಂದು ತಾಟಸ್ಥ ನಾಯಕ ರಾಜಕುಮಾರ ಸವನ್ನ ಫೌ ತಿಳಿಸಿದ್ದಾರೆ.

ವಾಷಿಂಗ್ಟನ್ 24 — ಚೀನಾದಿಂದ ಹಾಂಗಕಾಂಗಿಗೆ ಚೀನಾ ನಿರಾಶ್ರಿತರು ಚಲಿಸುತ್ತಿರುವ ದುರಂತ ವಿಶ್ವ ಕಮ್ಯೂನಿಸ್ಟ್ ಚಳುವಳಿ ಪಡೆಸದ ಮೈಲುಗಲ್ಲು ಎಂದು ಇಲ್ಲಿ ಸಂಬಲಾಗಿದೆ.

ಲಂಡನ್ ವಿಶ್ವವಿದ್ಯಾಲಯಕ್ಕೆ ಭಾರತೀಯರು

ನವದೆಹಲಿ 24— ಮಾಜಿ ಕಾಂಗ್ರೋ ಪ್ರಧಾನಿ ಪ್ಯಾಟ್ರಿಸ್ ಲುಮುಂಬರ ನೆನಪಿನಲ್ಲಿ ಮಾಸ್ಕೋದಲ್ಲಿ ಸ್ಥಾಪಿಸಿರುವ ಜನತಾ ಮೈತ್ರಿ ವಿಶ್ವವಿದ್ಯಾನಿಲಯದಲ್ಲಿ ಎಂಜಿನಿಯರಿಂಗ್ ಡಿಪ್ಲೊಮಾ ಪಾಠಕ್ರಮದ ಅಧ್ಯಯನ ಮಾಡುವುದಕ್ಕಾಗಿ 27 ಜನ ಭಾರತೀಯರನ್ನು ಆರಿಸಲಾಗಿದೆ.

ಭಾರತಕ್ಕೆ ಬ್ರಿಟನ್ ನ ಸಾಲ

ನವದೆಹಲಿ 23— ಭಾರತದ ಶ್ರೀಮಂತ ಯೋಜನೆ ಅಂಗವಾಗಿ ಕೈಗೊಳ್ಳುವ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗಾಗಿ ಹಣ ಒದಗಿಸುವ ದೃಷ್ಟಿಯಿಂದ ಬ್ರಿಟಿಷ್ ಸರಕಾರವು ಒದಗಿಸುವ ಇನ್ನೂ ಎರಡು ಸಾಲಗಳಿಗೆ ಸಂಬಂಧಪಟ್ಟಂತೆ ದೆಹಲಿಯಲ್ಲಿ ಈ ದಿನ ಸಹಿ ಹಾಕಲಾಯಿತು — ಒಂದು ಎರಡು ಕೋಟಿ ಇಪ್ಪತ್ತು ಲಕ್ಷ ಪೌಂಡುಗಳು : ಇನ್ನೊಂದು ಒಂದು ಕೋಟಿ ಪೌಂಡುಗಳ ಪ್ರಮಾಣದ್ದಾಗಿದೆ .... ಈ ಎರಡು ಸಾಲಗಳನ್ನೂ 25 ವರ್ಷಗಳಲ್ಲಿ ಹಿಂದಿರುಗಿಸಬೇಕು : ಕಂತುಗಳ ಪಾವತಿ ಏಳು ವರ್ಷಗಳ ನಂತರ ಆರಂಭವಾಗುತ್ತದೆ.

ಸರ್ಕಾರಿ ನೌಕರನ ಮರಣದಿಂದ ಅನಾಥರಾಗುವ ಸಂಸಾರಗಳಿಗೆ

ನವದೆಹಲಿ 23 —ಕೆಲಸದಲ್ಲಿರುವಾಗಲೇ ಹಠಾತ್ತನೆ ಸರ್ಕಾರಿ ನೌಕರನೊಬ್ಬನು ಸತ್ತರೆ ಮತ್ತು ಬೇರೆ ಆಶ್ರಯವಿಲ್ಲದೆ ಅತನ ಸಂಸಾರವು ಎಕ್ಕಟ್ಟಾದ ಪರಿಸ್ಥಿತಿಗೆ ಏಲುಕವಂತಾದರೆ, ಗತಿಸಿದವನ ಕುಟುಂಬದಲ್ಲಿನ ವ್ಯಕ್ತಿಗೆ ಅಥವಾ ಅತನ ಹತ್ತಿರದ ಸಂಬಂಧಿಕನಿಗೆ ಉದ್ಯೋಗ ವಿನಿಯಾ ಕೇಂದ್ರಗಳ ಮೂಲಕ ಉದ್ಯೋಗ ದೊರಕಿಸಿಕೊಡಲು ಶ್ರಮಿಸುತ್ತವೆ.

ವಿಮಾನಯಾನ ಮತ್ತು ಬಿಸ್ಕತ್ತು

ಭಾರತದ ಸುವ್ಯವಸ್ಥಿತ ಬಿಸ್ಕತ್ತು ಉದ್ದಿಮೆ ಕ್ಷೇತ್ರಗಳಲ್ಲಿ ಪ್ರತಿ ವರ್ಷವೂ ೫೦೦೦೦ ಟನ್ನು ಬಿಸ್ಕತ್ತು ತಯಾರಿಸುವ 40 ಕಾರ್ಖಾನೆಗಳಿವೆ : 1960 ರಲ್ಲಿ ಈ ಕಾರ್ಖಾನೆಗಳು ಸುಮಾರು 24000 ಟನ್ನು ಬಿಸ್ಕತ್ತುಗಳನ್ನು ಉತ್ಪಾದಿಸಿದವು — ವಿಮಾನಯಾನಿಗಳ ತಯಾರಿಕೆಗಾಗಿ ಸುವ್ಯವಸ್ಥಿತ ಕ್ಷೇತ್ರದಲ್ಲಿ 44 ಕಾರ್ಖಾನೆಗಳಿವೆ ; ಈ ಕಾರ್ಖಾನೆಗಳು ಸುಮಾರು 50000 ಟನ್ನುಗಳಷ್ಟು ಉತ್ಪಾದನಾ ಸಾಮರ್ಥ್ಯ ಪಡೆದಿವೆ : ಪ್ರತಿ ವರ್ಷ 17000 ಟನ್ನು ವಿಮಾನಯಾನಿಗಳನ್ನು ಮಾತ್ರ ಉತ್ಪಾದಿಸಲು ಅವುಗಳಿಗೆ ಸಾಧ್ಯವಾಗಿದೆ.

ಗೋರಕ್ಷಣ ಪತ್ರಿಕೆಯಲ್ಲಿ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ವ್ಯಾಪಾರದಲ್ಲಿ, ಪಶುವೈದ್ಯ, ಕೃಷಿಕಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ಪಾಠ್ಯಗಳನ್ನೂ ಪಂದನಾಪೂರ್ವಕವಾಗಿ ಸ್ವೀಕರಿಸಲಾಗುತ್ತದೆ

SHAKTI SUDHA

A Superb Tonic

ವುಡ್‌ಲಾಂಡ್ಸ್ ಆಕರ್ಷಣೆಯ 16 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 25-5-62 ರಿಂದ

ಮಾಮಿಯಾರುಂ ಒರವೀಟು ಮರುಮಗಳೇ [ತಮಿಳು]

ನಟವರ್ಗ— ಎಂ ಎ ರಾಜಂ, ದೇವಿಕಾ, ಬಾಲಾಜಿ, ರಾಜೇಂದ್ರ

[ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause

ಆಮೇರಿಕ— ಹೆಲೆನ್ ಕೆಲರ್ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Pracharn Nirata M. S. Krishna Rao, at the Satyavadi Press, Chamarajpuram, Mysore 4.